ಇ. ಕಾವೇರಿ ನೀರು ಸರಬರಾಜು ಮಾಡುವ 2ನೇ ಹಂತದ ಯೋಜನೆಯು ಪೂರ್ಣಗೊಂಡಿದ್ದು ನವೆಂಬರ್ 2000ರಲ್ಲಿ ಚಾಲನೆಗೊಳಿಸಲಾಗಿದೆ. ಈ ಯೋಜನೆಯು ವ್ಯಾಪ್ತಿಗೆ ಒಳಪಡಿಸುವ ನಗರದ ಪ್ರದೇಶಗಳ ಜನತೆಗೆ ಈಗ ಸಾಕಾಗುವಷ್ಟು ನೀರು ಸರಲರಾಜಾಗುತ್ತಿದೆ. 4 ಗಂಟೆಗಳ ವಿದ್ಯುತ್‌ಶಕ್ತಿ ಕಡಿತವಿದಾಗ್ಯೂ ದಿನಂಪ್ರತಿ 12.0 ದಶಲಕ್ಷ ಲೀಟರ್ ಶುದ್ಧ ನೀರನ್ನು ನಗರಕ್ಕೆ ಒದಗಿಸಲಾಗುತ್ತಿದೆ. ಮುಂಜಾಗರೂಕತಾ ಕ್ರಮವಾಗಿ ಕಾವೇರಿ ನದಿಯಲ್ಲಿ ಮರಳಿನ ಚೀಲಗಳಿಂದ ತಡೆಗೋಡೆ ಮಾಡಿನೀರಿನ ಮಟ್ಟವನ್ನು ಹೆಚ್ಚಿಸಲಾಗಿದೆ. ಇದಲ್ಲದೆ ನಗರದ ವ್ಯಾಪ್ತಿಗೆ ಹೊಸದಾಗಿ ಒಳಪಟ್ಟು ಪ್ರದೇಶಗಳಿಗೆ ನೀರು ಸರಬರಾಜು ಮಾಡುವ ಉದ್ದೇಶದಿಂದ ಕೊಳವೆ ಬಾವಿಗಳನ್ನು ತೋಡುವ ಹಾಗೂ ಕೊಳವೆ ಮಾರ್ಗ ವಿಸ್ತರಿಸುವ ಕಾಮಗಾರಿಯ ರೂ 79.60 ಲಕ್ಷಗಳ ಪ್ರಸ್ತಾವನೆಯನ್ನು ಕನನೀಸ ಮತ್ತು ಒಳಮಂಡಲಿಯಿಂದ ಮಂಡ್ಯದ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಗಿದ್ದು. ಈ ಹಣ-ಬಿಡುಗಡೆಯಾಗಿದೆ ಕೊಡಲೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ಮಂಡ್ಯ ನಗರದಲ್ಲಿನ ಪೂರ್ವ ಪೊಲೀಸ್ ಠಾಣೆಗೆ ಸ್ವಂತ ಕಟ್ಟಡದ ಸೌಲಭ್ಯ

120(178) ಶ್ರೀ ಎಂ.ಎಸ್ ಆತ್ಮಾನಂದ(ಮಂಡ್ಯ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ. ಮಂಡ್ಯ ನಗರದಲ್ಲಿ ಪೂರ್ವ ಪೊಲೀಸ್ ಠಾಣೆಗೆ ಕಟ್ಟಡ ನಿರ್ಮಾಣದ ಅವಶ್ಯಕತೆ ಇರುವುದು ಸರ್ಕಾರವು ಆಲೋಚಿಸಿದೆಯೆ.

ಆ. ಹಾಗಿದ್ದಲ್ಲಿ ಕಟ್ಟಡದ ಸೌಲಭ್ಯವನ್ನು ಒದಗಿಸಲು ಸರ್ಕಾರವು ಕೈಗೊಂಡ ಕ್ರಮವೇನು?

ಶ್ರೀ ಮಲ್ಲಿಕಾರ್ಜುನಖರ್ಗೆ (ಗೃಹ ಸಚಿವರು)

ಅ. ಹೌದು

ಆ. ಮಂಡ್ಯ ಪೂರ್ವ ಪೊಲೀಸ್ ಠಾಣೆಯನ್ನು ಮತ್ತು ಸಂಚಾರಿ ಪೊಲೀಸ್ ಠಾಣೆಯನ್ನು ರೂ 25.67 ಲಕ್ಷ ವೆಚ್ಚದಲ್ಲಿ ನಿರ್ಮಿಸಲು ಶ್ರೀ .ಎಸ್. ದಾಮೋದರ ರಾಜು ಎಂಬುವರಿಗೆ ಗುತ್ತಿಗೆಯನ್ನು ನೀಡಲಾಗಿದೆ. ಹಾಗೂ ಕಾಮಗಾರಿಯು ಪ್ರಗತಿಯಲ್ಲಿದ್ದು ದಿನಾಂಕ : 30-11-03 ರೊಳಗೆ ಪೂರ್ಣ ಗೊಳಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ.

ರಾಜ್ಯದ ಮಹಾನಗರ ಪಾಲಿಕೆಗಳ ವಿವರ

122(102) ಶ್ರೀ ಬೆಲ್ಲದ ಚಂದ್ರಕಾಂತ ಗುರಪ್ಪ (ಧಾರವಾಡ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ. ಧಾರವಾಡ- ಹುಬ್ಬಳ್ಳಿ ಮಹಾನಗರವು ಕರ್ನಾಟಕದ 2ನೇ ಅತಿದೊಡ್ಡ ಮಹಾನಗರ ಸಭೆಯಾಗಿರುವುದು ನಿಜವೇ?

ಆ. ನಿಜವಿದ್ದಲ್ಲಿ ಮಹಾನಗರ ಸಭೆಗೆ ಸರ್ಕಾರ ನೀಡುತ್ತಿರುವ ಅನುದಾನ ಮೊತ್ತ ಎಷ್ಟು? (ಯೋಜನಾವಾರು ವಿವರ ಒದಗಿಸುವುದು)

ಇ. ಅದೇ ರೀತಿ ರಾಜ್ಯದ ಇತರೆ ಮಹಾನಗರ ಪಾಲಿಕೆಗೆ ನೀಡುವ ವಿವಿಧ ಅನುದಾನಗಳೆಷ್ಟು? (ಕಳೆದ 3 ವರ್ಷಗಳ ಪೂರ್ಣ ವಿವರ ನೀಡುವುದು)

ಈ. ಈ ಎಲ್ಲಾ ಮಹಾನಗರ ಪಾಲಿಕೆಗಳ ಕುಡಿಯುವ ನೀರಿನ ವ್ಯವಸ್ಥೆ ಯಾವ ರೀತಿ ಇದೆ ಪ್ರತಿ ನಿತ್ಯ ಕುಡಿಯುವ ನೀರು ಪೂರೈಕೆ ಯಾಗುತ್ತಿದೆಯೇ ನೀರಿನ ಕೊರತೆ ಯಾವ